ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಬಿ ಪಿ ಆರ್ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ನಿಪಿ-1 ಎಂದು, ದೂರಿನ ದೃಢೀಕೃತ ನಕಲನ್ನು ನಿಪಿ-2 ಎಂದು, ದೋಷಾರೋಪಣಾ ಪಟ್ಟಿಯ ದೃಢೀಕೃತ ನಕಲನ್ನು ನಿಪಿ-3 ಎಂದು, ಐಎಂವಿ ವರದಿಯ ದೃಢೀಕೃತ ನಕಲನ್ನು ನಿಪಿ-4 ಎಂದು, ಗಾಯದ ಪ್ರಮಾಣ ಪತ್ರವನ್ನು ನಿಪಿ-5 ಎಂದು, ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು ನಿಪಿ-6 ಎಂದು, ಡಿಸ್ಚಾರ್ಜ್ ಸಮ್ಮರಿಯನ್ನು ನಿಪಿ-7 ಎಂದು, 1 ವೈದ್ಯಕೀಯ ಬಿಲ್ಲುಗಳನ್ನು ಹಾಜರುಮಾಡಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಒಂದು ಅರ್ಜಿದಾರರ ಆಧರ್ ನಕಲು ಪ್ರತಿಯನ್ನು ಹಾಜರು ಮಾಡಿರುತ್ತಾರೆ.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ವಕೀಲರಿಂದಃ

ಎದುರುದಾರರು ಏಕಪಕ್ಷಿಯವಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ ಬಿ.ಟಿ)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ

ಪೀಠಾಧಿಕಾರಿಗಳು